ಮೀನಾಕ್ಷೀ ರಾಮಗುಂಡಿ, ಬೈಲಹೊಂಗಲ

ಹೆಂಡತಿಯಿಂದ ಬರುವ ಫೋನಿಗೂ, ಬಾಸ್‌ನಿಂದ ಬರುವ ಕಾಲ್‌ಗೂ ವ್ಯತ್ಯಾಸ?



ಬಾಸ್‌ನದು ಸಮನ್ಸ್; ಸತಿಯದು ವಾರಂಟ್.

ಮಲ್ಲಿಕಾರ್ಜುನ, ಸುರಧೇನುಪುರ

ತಮ ಎಂದರೆ ಕತ್ತಲು. ಮತ ಎಂದರೆ?

ಬೆರಳನ್ನು ಕಪ್ಪಾಗಿಸಿ ಜನರನ್ನು ಬೆಪ್ಪಾಗಿಸುವ ಸೂತ್ರ.

ಸಿಹಿಮೊಗೆ ರಮೇಶ್, ಮೈಸೂರು

ಅನುಮಾನ, ಅವಮಾನ; ಈ ಎರಡು ಪದಗಳು ಜೀವನದಲ್ಲಿ ಎಷ್ಟು ಮುಖ್ಯ?

ಬಹಳವೇ. ರಾಮನ ಅನುಮಾನದಿಂದ ರಾಮಾಯಣ; ದುರ್ಯೋಧನನ ಅವಮಾನದಿಂದ ಕುರುಕ್ಷೇತ್ರ.

ನಾ. ಜ್ಯೋತಿ, ಹೂವಿನಹಡಗಲಿ

ಮಹಾ ದುಂದುವೆಚ್ಚ ಮಾಡುವುದು ಯಾವಾಗ ಮತ್ತು ಪರಿಣಾಮವೇನು?




ಹೊಸ ಕಾರು/ಹೆಂಡತಿಯನ್ನು ಹೊಂದಿದಾಗ; ಪರಿಣಾಮ ಲೋನ್ ರಿಕವರಿ ವ್ಯಾನ್‌ನ ದರ್ಶನ..

ವಿ. ಹೇಮಂತಕುಮಾರ್, ಬೆಂಗಳೂರು

ಅಂದು ಪತಿಯೇ ಪರದೈವ ಎನ್ನುತ್ತಿದ್ದರು. ಇಂದು?

ತೆಪರ ಪತಿಯೇ ದೈವ.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಮುಖ್ಯ ಬೆಳೆಗಿಂತಲೂ 'ಕೂಳೆ' ಬೆಳೆಯ 'ಫಸಲೇ' ಚೆನ್ನಾಗಿ ಬರುತ್ತದಲ್ಲ?

ರಾಜಕೀಯ ನಿಯಮ; ಸಂಸ್ಕಾರ ಇಲ್ಲದ್ದಕ್ಕೆ ರಫ್ತಾರ್ ಅಧಿಕ.

ಪಿ. ಚಿದಾನಂದ, ಜವನಗೊಂಡನಹಳ್ಳಿ

ಈ ಕಾಲದಲ್ಲಿ ಕೆಟ್ಟವರಿಗೆ ಒಳ್ಳೆಯದಾಗುತ್ತಲ್ಲ?

ಒಳ್ಳೆಯವರು ನಾಯಕರಾಗದೆ ನಾಯಿ, ಕುರಿಗಳಾಗಿರುವುದೇ ಇದಕ್ಕೆ ಕಾರಣವಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಅಂದು ಹರಿಶ್ಚಂದ್ರ ಸ್ವಯಂ ಹರಾಜು ಹಾಕಿಕೊಂಡ. ಇಂದು ಮತದಾರ ಸ್ವಯಂ ಹರಾಜಾಗುತ್ತಿದ್ದಾನಲ್ಲ?

ವ್ಯತ್ಯಾಸವಿಷ್ಟೆ; ಅವನು ಗುಣ ಎಂದು ತೋರಿಸಿಕೊಂಡ; ಇವರು ಗುಣಿಯನ್ನು ತೋಡಿಕೊಂಡರು.

ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ

ಚಾಪೆಯ ಕೆಳಗೆ ನುಸುಳಬಹುದು. ರಂಗೋಲಿಯ ಕೆಳಗೆ ನುಸುಳುವುದು ಹೇಗೆ?

ಹ್ಞ! ಈ ಪ್ರಶ್ನೆಗೆ ಯಾವುದೇ ಕಟ್ಟಿರುವೆಯೂ ಉತ್ತರ ಕೊಟ್ಟೀತು!

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಅಭಿಮಾನಕ್ಕೂ, ಸ್ವಾಭಿಮಾನಕ್ಕೂ ವ್ಯತ್ಯಾಸವೇನು?

ತಲೆ ಎತ್ತಿ ನೋಡಿದರೆ ಅಭಿಮಾನ; ತಲೆ ಎತ್ತಿ ನಡೆದರೆ ಸ್ವಾಭಿಮಾನ.

ಪಿ.ಜೆ. ರಾಘವೇಂದ್ರ, ಮೈಸೂರು

ಪಕ್ಷಾಂತರಿಗಳಿಗೂ, ಪುನರ್ವಿವಾಹಿತರಿಗೂ ಏನು ವ್ಯತ್ಯಾಸ?

ಪುನರ್ವಿವಾಹಿತರಿಗೆ ಮರ್ಯಾದೆಯಿಂದ ಬಾಳುವ ಆಲೋಚನೆ ಇರುತ್ತದೆ.

ನಾರಾಯಣ ಯಾಜಿ, ಶಿರಾಲಿ

ಇಲ್ಲೊಬ್ಬ, ಹುಟ್ಟುಕುರುಡನ ಬಳಿ 'ಮಾನವನಾಗಿ ಹುಟ್ಟಿದ್ಮೇಲೆ ಏನೇನ್ಕಂಡಿ?' ಎನ್ನುತ್ತಿರುವನಲ್ಲಾ?

'ಮನ್ಸತ್ವಾನೇ ಇಲ್ದಿರ್ವಂಥ ಮನ್ಶ್ಯನ್ ದಂಡಿ' ಎಂದು ಅವನು ಉತ್ತರಿಸಿದನಂತಲ್ಲ.

ಚನ್ನವೀರಪ್ಪ, ಹಿರೇಹಡಗಲಿ

ಆದರ್ಶ ದಂಪತಿಗಳಾದವರು ಮೊದಲು ಅವರ ಮಾತಾಪಿತೃಗಳಿಗೆ ಆದರ್ಶ ಮಕ್ಕಳಾದರೆ ಒಳಿತಲ್ಲವೆ?

ಟೆಕ್ನಿಕಲ್ ಪ್ರಾಬ್ಲಂ – ಒಳ್ಳೆಯ ಮಗ ಒಳ್ಳೆಯ ಗಂಡನಾಗಲಾರ.

## ಬಹುಮಾನಿತ ಪ್ರಶ್ನೆ

ಜೀವಿ, ಗೊಂಡೇದಹಳ್ಳಿ

ಸರ್ಕಾರಿ ನೌಕರಿಗೆ ಅರ್ಹತೆಯ ಮುಂಬಾಗಿಲಿಗಿಂತ ಲಂಚದ ಹಿಂಬಾಗಿಲಿಂದ ಬಂದವರದೇ ಹೆಚ್ಚಿನ ಆರ್ಭಟವಲ್ಲ?

ಪ್ರೆಷರ್ ಕುಕ್ಕರ್ ನಿಯಮ. ಒಳ ಒತ್ತಡ ಹೆಚ್ಚಿದಷ್ಟೂ ಶಿಳ್ಳೆಯ ದೀರ್ಘತೆ ಅಧಿಕ.

ಎಂ.ಎ. ಕುಮಾರ್, ಬೆಂಗಳೂರು

ಹೆಣ್ಣನ್ನು ಅರಿತು ಬಾಳಿದರೆ ಸುಖವೋ, ಅಳೆದು ನೋಡಿದರೆ ಸೌಭಾಗ್ಯವೋ?

ಎರಡೂ ಒಳಿತೇ; ಇದು ಪತಿಗೆ, ಅದು ದರ್ಜಿಗೆ.

ಪಿ. ಜಯವಂತ ಪೈ, ಕುಂದಾಪುರ

ಗ್ರಾವಿಟಿಗೂ, ಗ್ರಾಚ್ಯುಟಿಗೂ ವ್ಯತ್ಯಾಸವೇನು?

ಗ್ರಾವಿಟಿ ಹಾರದಂತೆ ತಡೆಯುತ್ತದೆ; ಗ್ರಾಚ್ಯುಟಿ ಮುಳುಗದಂತೆ ತಡೆಯುತ್ತದೆ.

ಜಗದೀಶ ಬಿ. ಹೊಸೂರು, ಮೈಸೂರು

ಇಲ್ಲೊಬ್ಬ ವೈದ್ಯರು ವಯಸ್ಸಾದ ದೇಹವು ಎಫ್.ಸಿ.ಗೆ ಬಂದಿರುವ ಕಾರ್‌ನಂತೆ ಎನ್ನುತ್ತಾರಲ್ಲ?

ಒಪ್ಪಲಾಗದು. ಕಾರಿಗೆ ಸ್ಕ್ರ್ಯಾಪ್ ವ್ಯಾಲ್ಯೂ ಇದೆ.

ಬಾ.ರಂ. ಸುರೇಶ್, ಶಿವಮೊಗ್ಗ

ಸತಿಪತಿಯರು ಉಂಡು ಮಲಗಿದ ಮೇಲೂ ಮಧ್ಯದಲ್ಲಿ ಜಗಳವಾಡಿದರೆ ಏನು ಮಾಡುವುದು?



ಮತ್ತೆ ತಿನ್ನಲು ಏನಾದರೂ ಕೊಟ್ಟು ಮಲಗಿಸಿ.

ರಮೇಶ್ ಬೊಂಗಾಳೆ, ಬೈಲಹೊಂಗಲ

ಕಹಿಯಾದ ಮಾತಿಗೂ, ಸವಿಯಾದ ಮಾತಿಗೂ ವ್ಯತ್ಯಾಸವೇನು?

ಅದು ತೆರಿಗೆ, ಇದು ತೆರಿಗೆ ವಿನಾಯಿತಿ.

ಅನಸೂಯ ಟಿ, ಕೇದಿಗೆಮನೆ

ಚುನಾವಣೆಯಲ್ಲಿ ಗುಪ್ತ ಮತದಾನದ ಬದಲು ಬಹಿರಂಗ ಮತದಾನ ಜಾರಿಗೆ ಬಂದರೆ?

ಮತಗಟ್ಟೆ ಹರಾಜುಕಟ್ಟೆಯಾಗುತ್ತದೆ.

■ ರಾಮ್